# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 451 |
| ಸದಸ್ಯರ ಹೆಸರು | : | ಶ್ರೀ ಮಂಜುನಾಥ್ ಭಂಡಾರಿ<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 10-07-2023 |
| ಉತ್ತರಿಸುವ ಸಚಿವರು | : | ಮಾನ್ಯ ಇಂಧನ ಸಚಿವರು |

***

<table>
<tr><th colspan="2">ಪ್ರಶ್ನೆ</th><th>ಉತ್ತರ</th></tr>
<tr><td>(ಅ)</td><td>ರಾಜ್ಯದ ಗ್ರಾಮ ಪಂಚಾಯಿತಿಗಳಲ್ಲಿ ಪ್ರಸ್ತುತ ಗ್ರಾಮ ಪಂಚಾಯಿತಿಗಳು ಪಾವತಿಸಬೇಕಾದ ಬೀದಿ ದೀಪ ಹಾಗೂ ಕುಡಿಯುವ ನೀರಿನ ಸ್ಥಾವರಗಳ ಬಾಕಿಯಿರುವ ವಿದ್ಯುತ್ ಶುಲ್ಕ ಎಷ್ಟು; (ವಿವರ ನೀಡುವುದು)</td><td>ರಾಜ್ಯದ ವಿದ್ಯುತ್ ಸರಬರಾಜು ಕಂಪನಿಗಳ ವ್ಯಾಪ್ತಿಯಲ್ಲಿ ದಿನಾಂಕ 31.05.2023ರ ಅಂತ್ಯಕ್ಕೆ ಗ್ರಾಮ ಪಂಚಾಯಿತಿಗಳು ಪಾವತಿಸಬೇಕಾದ ಬೀದಿ ದೀಪ ಹಾಗೂ ಕುಡಿಯುವ ನೀರಿನ ಸ್ಥಾವರಗಳ ಬಾಕಿಯ ಮೊತ್ತದ ಕಂಪನಿವಾರು ವಿವರಗಳು ಕೆಳಕಂಡಂತಿದೆ:-
<table>
<tr><th>ಕಂಪನಿ ಹೆಸರು</th><th>ಕುಡಿಯುವ ನೀರು ಸರಬರಾಜು</th><th>ಬೀದಿ ದೀಪ</th><th>ಒಟ್ಟು ಬಾಕಿ ಮೊತ್ತ (ರೂ. ಕೋಟಿಗಳಲ್ಲಿ)</th></tr>
<tr><td>ಬೆಸ್ಕಾಂ</td><td>3457.23</td><td>514.45</td><td>3971.68</td></tr>
<tr><td>ಮೆಸ್ಕಾಂ</td><td>121.66</td><td>23.58</td><td>145.24</td></tr>
<tr><td>ಸೆಸ್ಕ್</td><td>337.76</td><td>96.30</td><td>430.06</td></tr>
<tr><td>ಹೆಸ್ಕಾಂ</td><td>510.58</td><td>77.56</td><td>588.14</td></tr>
<tr><td>ಜೆಸ್ಕಾಂ</td><td>1018.81</td><td>620.23</td><td>1639.04</td></tr>
<tr><td>ಒಟ್ಟು ಮೊತ್ತ</td><td>5446.04</td><td>1332.12</td><td>6774.16</td></tr>
</table></td></tr>
<tr><td>(ಆ)</td><td>ಮೊದಲು ಈ ರೀತಿ ಪಾವತಿ ಆಗದ ಒಟ್ಟು ಮೊತ್ತದಲ್ಲಿ ಎಷ್ಟು ವರ್ಷಗಳವರೆಗೆ ವಿದ್ಯುತ್ ಶುಲ್ಕವನ್ನು ಮನ್ನಾ ಮಾಡಲಾಗಿದೆ; (ಮನ್ನಾ ಮಾಡಿದ ದಿನಾಂಕ, ಒಟ್ಟು ಮೊತ್ತ, ಸುತ್ತೋಲೆಗಳು ಮತ್ತು ಮನ್ನಾ ಆದೇಶ ಸಹಿತ ಮಾಹಿತಿ ನೀಡುವುದು)</td><td>ರಾಜ್ಯದ ಗ್ರಾಮ ಪಂಚಾಯಿತಿಗಳ ಕುಡಿಯುವ ನೀರು ಸರಬರಾಜು ಮತ್ತು ಬೀದಿ ದೀಪ ಸ್ಥಾವರಗಳ ಬಾಬ್ತು ದಿನಾಂಕ 31.03.2015 ರಂತೆ ರೂ.3766.81 ಕೋಟಿ ಮೊತ್ತವು ಪಾವತಿಸಲು ಬಾಕಿ ಇದ್ದು, ಕರ್ನಾಟಕ ಸರ್ಕಾರವು ಖಾತರೀಕರಣ ಯೋಜನೆಯಡಿ ವಿದ್ಯುತ್ ಸರಬರಾಜು ಕಂಪನಿಗಳಿಗೆ ಸರ್ಕಾರದ ಆದೇಶ ಸಂಖ್ಯೆ: ಇಎನ್-3 ಪಿ.ಎಸ್.ಆರ್-2016, ಪಿ-3, ದಿನಾಂಕ: 31-03-2017 ರಂತೆ ಪಾವತಿಸಿರುತ್ತದೆ. ಸರ್ಕಾರದ ಆದೇಶದ ಪ್ರತಿಯನ್ನು ಅನುಬಂಧ-1 ರಲ್ಲಿ ಒದಗಿಸಲಾಗಿದೆ.</td></tr>
<tr><td>(ಇ)</td><td>ಗ್ರಾಮ ಪಂಚಾಯಿತಿಗಳ ಕುಡಿಯುವ ನೀರಿನ ಮತ್ತು ಬೀದಿ ದೀಪ ಸ್ಥಾವರಗಳಿಗೆ ವಿದ್ಯುತ್ ಕಂಪನಿಗಳು ವಿಧಿಸುತ್ತಿರುವ ದರ ಎಷ್ಟು; ಇತರ ವಿದ್ಯುತ್ ಸ್ಥಾವರಗಳಿಗೆ ವಿಧಿಸುತ್ತಿರುವ ದರ ಎಷ್ಟು; ವಿದ್ಯುತ್ ವಿತರಣಾ ಕಂಪನಿವಾರು ಮತ್ತು ಇತರ ಬಳಕೆದಾರರಿಗೆ ವಿಧಿಸುತ್ತಿರುವ ದರಗಳ ಸಹಿತ ವಿವರ ನೀಡುವುದು;</td><td>ಗ್ರಾಮ ಪಂಚಾಯಿತಿಗಳ ಕುಡಿಯುವ ನೀರಿನ ಮತ್ತು ಬೀದಿ ದೀಪ ಸ್ಥಾವರಗಳಿಗೆ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು, ದಿನಾಂಕ: 12.05.2023ರ ದರ ಆದೇಶದ ಪ್ರಕಾರ ವಿದ್ಯುತ್ ಸರಬರಾಜು ಕಂಪನಿಗಳು ಈ ಕೆಳಕಂಡಂತೆ ವಿದ್ಯುತ್ ದರಗಳನ್ನು ವಿಧಿಸಲಾಗುತ್ತಿದೆ.<br>
1. ಕುಡಿಯುವ ನೀರಿನ ಸ್ಥಾವರಗಳಿಗೆ:
<table>
<tr><td>ನಿಗದಿತ ಶುಲ್ಕ:</td><td>67 ಹೆಚ್.ಪಿ ವರೆಗೆ ಪ್ರತಿ ಹೆಚ್.ಪಿ ಗೆ ಮಾಸಿಕ ರೂ.175/-<br>67 ಹೆಚ್.ಪಿ ಗಿಂತ ಅಧಿಕ ಪ್ರತಿ ಹೆಚ್.ಪಿ ಗೆ ಮಾಸಿಕ</td></tr>
<tr><td>ವಿದ್ಯುತ್ ಬಳಕೆ ಶುಲ್ಕ:</td><td>ಪ್ರತಿ ಯೂನಿಟ್ ಗೆ ರೂ.5.50</td></tr>
</table>
2. ಸಾರ್ವಜನಿಕ ದೀಪಗಳಿಗೆ:
<table>
<tr><td>ನಿಗದಿತ ಶುಲ್ಕ:</td><td>ಪ್ರತಿ ಕಿಲೋ ವ್ಯಾಟ್ ಗೆ ಮಾಸಿಕ ರೂ.175/-</td></tr>
<tr><td>ವಿದ್ಯುತ್ ಬಳಕೆ ಶುಲ್ಕ:</td><td>ಪ್ರತಿ ಯೂನಿಟ್ ಗೆ ರೂ.7.00</td></tr>
</table>
ಇತರೆ ವಿದ್ಯುತ್ ಸ್ಥಾವರಗಳಿಗೆ ವಿದ್ಯುತ್ ಸರಬರಾಜು ಕಂಪನಿಗಳು ವಿಧಿಸುತ್ತಿರುವ ವಿದ್ಯುತ್ ದರ ಸೂಚಿಯ ವಿವರಗಳನ್ನು ಅನುಬಂಧ-2 ರಲ್ಲಿ ಒದಗಿಸಲಾಗಿದೆ.</td></tr>
</table>

...2

| | | |
|---|---|---|
| (ಈ) | ಸದರಿ ವಿದ್ಯುತ್ ಬಿಲ್ಲಿನ ಪಾವತಿಯನ್ನು ಪಾವತಿಸಲು ಗ್ರಾಮ ಪಂಚಾಯಿತಿಗಳಿಗೆ ಅಗತ್ಯ ಹಣಕಾಸು ಸಾಮರ್ಥ್ಯ ಇರುವ ಬಗ್ಗೆ ಪರಿಶೀಲಿಸಲಾಗಿದೆಯೇ; ಇಲ್ಲದಿದ್ದಲ್ಲಿ, ಈ ಕುರಿತು ಸರ್ಕಾರದ ಕ್ರಮಗಳೇನು; (ವಿವರ ನೀಡುವುದು) | ಲೆಕ್ಕಶೀರ್ಷಿಕೆ 2515-00-198-1-07-300 ರಡಿಯಲ್ಲಿ ವಾರ್ಷಿಕವಾಗಿ ರಾಜ್ಯದ ಎಲ್ಲಾ ಗ್ರಾಮ ಪಂಚಾಯಿತಿಗಳ ವಿದ್ಯುತ್ ಬಿಲ್ ಮೊತ್ತ ಪಾವತಿಸಲು ರೂ.391.79 ಕೋಟಿಗಳ ಅನುದಾನ ಹಂಚಿಕೆ ಮಾಡಿದ್ದು, ನಾಲ್ಕು ತ್ರೈಮಾಸಿಕ ಕಂತುಗಳಲ್ಲಿ ಬಿಡುಗಡೆ ಮಾಡಲಾಗುತ್ತದೆ.<br><br>ಈಗಾಗಲೇ 15ನೇ ಹಣಕಾಸು ಯೋಜನೆ ಹಾಗೂ ಗ್ರಾಮ ಪಂಚಾಯತ್ ಸ್ವಂತ ಸಂಪನ್ಮೂಲದಿಂದ ಕುಡಿಯುವ ನೀರು ಹಾಗೂ ಬೀದಿ ದೀಪ ಸ್ಥಾವರಗಳ ಬಾಕಿ ಇರುವ ವಿದ್ಯುತ್ ಬಿಲ್ಲನ್ನು ಪಾವತಿಸಲು ಗ್ರಾಮ ಪಂಚಾಯಿತಿಗಳಿಗೆ ನಿರ್ದೇಶನ ನೀಡಲಾಗಿದೆ. |
| (ಉ) | ಈಗಾಗಲೇ ಇರುವ ಬೀದಿ ದೀಪ ಹಾಗೂ ಕುಡಿಯುವ ನೀರಿನ ಸ್ಥಾವರಗಳು ಹೆಚ್ಚುತ್ತಿರುವ ಬಿಲ್ಲುಗಳ ಹೊರೆಯ ಹಿನ್ನಲೆಯಲ್ಲಿ ವಿದ್ಯುತ್ತನ್ನು ಸೌರ ಶಕ್ತಿ ಮೂಲಕ ಒದಗಿಸಲು ಕ್ರಮವಹಿಸಲಾಗಿದೆಯೇ; (ಸುತ್ತೋಲೆ ಪ್ರತಿ ಸಹಿತ ಮಾಹಿತಿ ನೀಡುವುದು) | ಸರ್ಕಾರದ ಮಾರ್ಗಸೂಚಿ ಸಂಖ್ಯೆ:ಗ್ರಾಅಪಂರಾ 300 ಜಿಪಸ 2022 ದಿನಾಂಕ:01-07-2022 ರಲ್ಲಿ 15ನೇ ಹಣಕಾಸು ಯೋಜನೆಯ ಅನುದಾನಕ್ಕೆ 2022-23ನೇ ಸಾಲಿನ ಕ್ರಿಯಾ ಯೋಜನೆ ತಯಾರಿಸುವ ಬಗ್ಗೆ ಮಾರ್ಗಸೂಚಿಗಳನ್ನು ಹೊರಡಿಸಲಾಗಿದ್ದು, ಅದರಲ್ಲಿ ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಹಾಗೂ ಗ್ರಾಮ ಪಂಚಾಯಿತಿಗಳಿಗೆ 15ನೇ ಹಣಕಾಸು ಆಯೋಗದ ಮೂಲ (ಅನಿರ್ಬಂಧಿತ) ಅನುದಾನದಡಿ ಅಗತ್ಯತೆ ಆಧಾರದ ಮೇಲೆ ವಿದ್ಯುತ್ ಬಿಲ್ಲುಗಳನ್ನು ಕಡಿಮೆ ಮಾಡುವ ಉದ್ದೇಶದಿಂದ ಅಸಂಪ್ರದಾಯಿಕ ಇಂಧನ ಕಾರ್ಯಕ್ರಮವಾದ ಸೋಲಾರ್ ವಿದ್ಯುತ್ತನ್ನು ಅಳವಡಿಸಿಕೊಳ್ಳಲು ಕ್ರಮ ವಹಿಸುವಂತೆ ತಿಳಿಸಲಾಗಿದೆ. ಮಾರ್ಗಸೂಚಿಯನ್ನು **ಅನುಬಂಧ-3 ರಲ್ಲಿ** ಒದಗಿಸಲಾಗಿದೆ. |
| (ಊ) | ಕೊಳವೆ ಬಾವಿಗಳಿಗೆ ವಿದ್ಯುತ್ ಸಂಪರ್ಕ ನೀಡುವಾಗ ಸೌರ ಶಕ್ತಿ ಬಳಕೆಯನ್ನು ಉತ್ತೇಜಿಸಲು ಸರ್ಕಾರದ ಕ್ರಮಗಳೇನು; ಈ ಕುರಿತು ಸರ್ಕಾರದ ನಿಲುವೇನು? (ವಿವರ ನೀಡುವುದು) | ರೈತರ ಕೊಳವೆಬಾವಿಗಳಿಗೆ ಸೌರಶಕ್ತಿ ಆಧಾರಿತ ಜಾಲಮುಕ್ತ ನೀರಾವರಿ ಪಂಪ್ ಸೆಟ್ ಅಳವಡಿಸುವ ಯೋಜನೆಯನ್ನು 2015-16ನೇ ಸಾಲಿನಲ್ಲಿ ಸರ್ಕಾರದಿಂದ ಜಾರಿಗೆ ತರಲಾಗಿದ್ದು, 2019-20 ನೇ ಸಾಲಿನಿಂದ ಸೌರ ಚಾಲಿತ ಕೃಷಿ ಪಂಪ್‌ಸೆಟ್‌ಗಳನ್ನು ಅಳವಡಿಸುವ ಕಾರ್ಯಕ್ರಮನ್ನು PM-KUSUM (Pradhan Mantri Kisan Urja Suraksha evam Uttan Mahaabhiyan) Component-B ಯೋಜನೆಯಡಿಯಲ್ಲಿ ಮುಂದುವರೆಸಲಾಗಿದೆ.<br><br>PM-KUSUM, Component-B ಯೋಜನೆಯಡಿಯಲ್ಲಿ ಕೇಂದ್ರ ಸರ್ಕಾರದಿಂದ 7.5 ಹೆಚ್.ಪಿ ಸೌರ ಪಂಪ್‌ಸೆಟ್ ಸಾಮರ್ಥ್ಯದ ವರೆಗೆ ಪ್ರತಿ ಸೌರ ಪಂಪ್‌ಸೆಟ್‌ಗೆ ಶೇ.30 ರಷ್ಟು ಕೇಂದ್ರ ಸಹಾಯಧನ ಒದಗಿಸಲಾಗುತ್ತಿದೆ. ರಾಜ್ಯ ಸರ್ಕಾರದಿಂದ ಸಾಮಾನ್ಯ ವರ್ಗದ ರೈತ ಫಲಾನುಭವಿಗಳಿಗೆ ಪ್ರತಿ ಸೌರ ಪಂಪ್‌ಸೆಟ್‌ಗೆ ಶೇ.30 ರಷ್ಟು ಹಾಗೂ ಪರಿಶಿಷ್ಟ ಜಾತಿ/ಪಂಗಡ ವರ್ಗದ ಫಲಾನುಭವಿಯ ಪಂಪ್‌ಸೆಟ್‌ಗೆ ಶೇ.50 ರಷ್ಟು ರಾಜ್ಯ ಸಹಾಯಧನ ಒದಗಿಸಲಾಗುತ್ತಿದೆ, ಇನ್ನುಳಿದ ಹಣವನ್ನು ರೈತ ಫಲಾನುಭವಿಗಳಿಂದ ಭರಿಸಿ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ. |

....3

| | | |
|---|---|---|
| | | ರಾಜ್ಯದಲ್ಲಿ ಈವರೆಗೆ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದಿಂದ (ಕೆ.ಆರ್.ಇ.ಡಿ.ಎಲ್) 4059 ಸಂಖ್ಯೆ ಸೌರ ಪಂಪ್‌ಸೆಟ್‌ಗಳನ್ನು ಅಳವಡಿಸಲಾಗಿದೆ. 2022-23ನೇ ಸಾಲಿನಲ್ಲಿ, PM-KUSUM, Component-B ಯೋಜನೆಯಡಿಯಲ್ಲಿ ಒಟ್ಟು ರೂ.10.00 ಕೋಟಿಗಳ ರಾಜ್ಯ ಸಹಾಯಧನ ಬಿಡುಗಡೆಯಾಗಿದ್ದು, ಕೆ.ಆರ್.ಇ.ಡಿ.ಎಲ್ ನಿಂದ ಸೌರ ಪಂಪ್‌ಸೆಟ್ ಅಳವಡಿಸುವ ಕಾರ್ಯವು ಪ್ರಗತಿಯಲ್ಲಿರುತ್ತದೆ. |

ಸಂಖ್ಯೆ: ಎನರ್ಜಿ 141 ಇಬಿಎಸ್ 2023

(ಕೆ.ಜೆ.ಜಾರ್ಜ್)
ಇಂಧನ ಸಚಿವರು

# Proceedings of the Government of Karnataka

Sub: Securitisation of Gram Panchayat Electricity dues outstanding as on 31.03.2015 and settlement of power purchase dues of Karnataka Power Corporation Ltd., (KPCL) on behalf of Electricity Supply Companies (ESCOMs) through adjustment of borrowings under securitisation scheme – Reg.

Read: 1) FD concept Note No: FD 1304 Exp-1/2014 dtd: 16.01.2016
2) PCKL Note No: PCKL/A12/24/2015-16 dtd: 19.11.2016
3) Cabinet Note No: EN 3 PSR 2016/P3 approved on 10.01.2017

Preamble:

1) The Rural Local Bodies in Karnataka have not been making full payment of Electricity charges of Gram Panchayaths since a very long time and arrears are accumulating over the years. The electricity charges outstanding as at the end of March-2015 was Rs. 3766.81 Crs. The Electricity Supply Companies (ESCOMs) in the State have not been able to make payment of power purchase cost of Karnataka Power Corporation Ltd., (KPCL) as the ESCOMs have to receive large amount from various category of consumer including Gram Panchayaths. The ESCOMs have been managing their finances over the years through shorterm borrowings towards its requirement for working capital.

2) The outstanding dues of electricity charges from Gram Panchayaths as at the end of March-2015 was Rs. 3766.81crs and the payable by ESCOMs to KPCL is also increasing, the Govt has decided to clear the KPCL power purchase dues in the books of accounts of ESCOMs to the extent of receivable from Gram Panchayaths through securitisation of the GP receivables. The receivables from the GPs by ESCOMs as at the end of March-2015 is as follows:

Rs in Crs

| ESCOM | GP Dues as on 31.03.2015 (Reconciled) |
|---|---|
| BESCOM | 1797.39 |
| MESCOM | 219.59 |
| HESCOM | 485.04 |
| GESCOM | 748.48 |
| CESC | 516.31 |
| **TOTAL** | **3,766.81** |

3) The power purchase cost (PPC) of KPCL payable by ESCOMs outstanding as at the end of November-2016 was Rs. 15252.53 crs.

4) Since, ESCOMs and KPCL are managing the daily finances through short term borrowings for day to day management, the cost of borrowing is adding to the cost of power as well as cost of supply. In view of the same, Finance Dept has proposed to clear not only the principal amount receivable from GPs but also the interest thereon outstanding as on 31.03.2015.

5) The ESCOMs are finding it difficult to finance the working capital requirement as the outstanding short term borrowings are also mounting up, the ESCOMs are requesting the State Govt to liquidate receivables from Gram Panchayaths. The KPCL is also requesting the Govt to arrange for clearing the outstanding power purchase dues from ESCOMs.

6) The Power Company of Karnataka Limited (PCKL) will be the Nodal Agency for securitisation of Gram Panchayath receivables and it is proposed to authorise PCKL to act as Nodal Agency.

7) PCKL has reported that as per the revised letter to the Banks & financial institutions, six banks have sent their letter of intent to participate in the securitisation to the extent of Rs 2800.00 Crs at the rate of interest ranging from 8.50% to 9.00%. The State Bank of India has offered to lend Rs 1800.00 Crs at the rate of interest of Rs 8.35%.

8) The Govt has decided to securitise the receivables from Gram Panchayaths outstanding as on 31.03.2015 of Rs 3766.81 Crs through borrowings from the financial institutions/ Banks on behalf of RDPR department and pay the outstanding Power Purchase Cost of KPCL on behalf of ESCOMs to the extent of securitisation. The Govt has agreed to provide necessary Govt guarantee for securitisation of Gram Panchayaths receivables and has also agreed to provide necessary budgetary support periodically over the years through the concerned Department towards debt servicing.

9) The cabinet has stated that future demand for electricity charges of Gram Panchayaths should invariably be paid regularly without allowing for accumulation of any arrears subsequent to the cut-off date of 31.03.2015. Hence, this order.

**Government Order No: EN 3 PSR 2016/P3, Dated: 31.03.2017**

1. **Govt is pleased to accord approval for securitisation of Gram Panchayath dues (including interest) of Rs 3766.81 crores outstanding as at the end of March 2015 as approved by the State Cabinet on 10.01.2017 and approval is also accorded for the following:**

i) For raising loan from Banks or any other Financial Institutions to an extant of Rs 3766.81 Crs and at the rate at the best possible rate considering that this loan will be virtually works out to be riskless.

ii) For appointing the Power Company of Karnataka Limited as nodal agency for implementing the securitization of Gram Panchayat dues, for entering into agreement for borrowings and documentations, releasing of the borrowed fund to KPCL on behalf of ESCOMs as per the approval of the Govt. for arranging periodical repayment of loans raised under this securitisation based on the revenue from sale of power to Gram Panchayats and its related installations, including the arrears of these installation for the period prior to 31st March 2015 and also for maintaining the accounts relating to securitization, debt servicing etc.

iii) For authorizing Power Company of Karnataka Limited to borrow additional sum from any other Financial Institutions / Banks if the intended banks does not lend to the extent of fund offered within the approved terms and conditions.

iv) For utilization of the borrowings under this scheme towards payment of Power Purchase dues of KPCL on behalf of ESCOMs to the extent of securitization amount, the breakup details of which is as in preamble para 2 above.

v) For providing Govt Guarantee for Securitisation of Gram Panchayath dues to the extent of Rs 3766.81 Crs and the Under Secretary, Energy Department is authorized to sign the Government Guarantee and the ESCOMs to bear the Guarantee commission.

vi) For providing necessary annual budgetary support for meeting the obligations of debt servicing.

vii) For making payment of revenue from sale of power (Electricity charges) including the past arrears of Gram Panchayaths to ESCOMs and ESCOMs channelize this revenue to PCKL to the extent of amount required for periodical repayment of the principal and interest (Debt Servicing) amount of securitisation till the completion of debt servicing.

viii) The RDPR Department to propose for the fund required for this purpose in the annual budget periodically over the years till the repayment of the loan including interest and facilitate channelising the revenue to PCKL through ESCOMs account for debt servicing.

ix) For transfer of receivables from Gram Panchayath dues to ESCOMs to PCKL to enable to hypothecate the receivables towards borrowings.

x) For waiver of interest of 2015-16 on outstanding dues as on 31.03.2015.

xi) It is also approved to adjust towards energy balancing dues through a separate order out of the payment made to KPCL through securitisation.

xii) The KPCL to account the payment of Power Purchase Cost under securitisation towards principal amount only.

xiii) The KPCL and ESCOMs to account the amount of securitisation suitably in their books of accounts so as to reduce the Power Purchase dues receivable from ESCOMs and the electricity dues receivable from RDPR department.

xiv) For RDPR department to account the securitisation amount suitably in the books of accounts to reduce their payable to the ESCOMs towards electricity dues to the tune of Rs 3766.81 Crs outstanding as on 31.03.2015 and also clear the future electricity demand charges periodically on time making necessary funding arrangement in advance as approved by the Cabinet.

xv) Approval is accorded for bearing all the incidental expenses of securitisation by the ESCOMs.

BY ORDER AND IN THE NAME OF
GOVERNOR OF KARNATAKA
(B .V. Srinivasaiah)
UNDER SECRETARY TO GOVERNMENT,
ENERGY DEPARTMENT
22034674

To:
1. The Compiler, for notification in the Karnataka Government Gazette.

Copy to:
1. The Accountant General (A&E) / (Audit-1 & Audit-2) in Karnataka, Bangalore-560 001.
2. The Additional Chief Secretary to Government, Finance Department, Vidhana Soudha, Bangalore.
3. The Principal Secretary to Government, Rural Development and Panchayath Raj Department, M S Building, Bangalore.
4. The Managing Director, Karnataka Power Transmission, Corporation Limited, Corporate Office, Kaveri Bhavan, Bangalore.
5. The Managing Director, Karnataka Power Corporation Limited, No. 82, Shakti Bhavan, Race Course Road, Bangalore.
6. The Managing Director, BESCOM/MESCOM/HESCOM/GESCOM/ CESC.
7. The Managing Director, PCKL, Kaveri Bhavan, Bangalore.
8. The Secretary (B&R), Finance Dept, Vidhana Soudha, Bangalore.

9. The Deputy Secretary (B&R), Finance Dept, Vidhana Soudha, Bangalore.
10. The Director, Treasury Network, Management Center, Khanija Bhavan, Bangalore.
11. The Joint Director, State Huzur Treasury, Nrupathunga Road, Bangalore.
12. The Secretary, Karnataka Electricity Regulatory Commission, M.G. Road, Bangalore.
13. Senior P.S. to Additional Chief Secretary to Govt., Energy Dept.
14. P.A. to Deputy Secretary to Govt., Energy Dept.
15. P.A. to Under Secretary to Govt., Energy Dept.
16. The Section Officer (R &I) Section, Energy Dept., Bangalore.
17. Section Guard file / Office copy / Spare copies.

Annexure-2

**Retail Supply Tariff for FY24 approved by KERC in Tariff Order 2023 Dated: 12.05.2023 for all ESCOMS except BESCOM**

| Approved by Commission | | | | | |
|---|---|---|---|---|---|
| **Tariff** | **Category Description** | **Load** | **F.C Rs.** | **Slab** | **E.C (Ps./kWh)** |
| LT-1 | BJ/KJ | Minimum | 100 | MESCOM CESC<br>HESCOM GESCOM | **861 859**<br>**869 875** |
| LT-2(a) | Domestic / AEH - | Per KW upto 50 KW | 110 | 0 -100 units | 475 |
| | BBMP, Municipal Corporations, | Every addn KW above 50 KW | 210 | 0 - All Units | 700 |
| LT-2(b) | Pvt. Edu Inst | Per KW upto 50 KW | 180 | All Units | 775 |
| | BBMP, Municipal Corporations, | Every addn KW above 50 KW | 250 | | |
| LT-3(a) | Commercial, BBMP, Municipal | Per KW upto 50 KW | 200 | All Units | 850 |
| | Corporations and all Urban areas | Every addn KW above 50 KW | 300 | | |
| LT-3(b) | Commercial - | Per HP / Kw | 200 | All unit | 1050 |
| LT-4(a) | IP Sets - <=10Hp | | | MESCOM CESC<br>HESCOM GESCOM | **667 692**<br>**734 722** |
| LT-4(b) | IP Sets Above 10 HP | Per HP | 135 | All Units | 410 |
| LT-4c | IP Sets - Horticulture | Per HP | 135 | All Units | 425 |
| LT-5(a) | Industrial | Below 100 HP | 140 | 0 to 500 units | 610 |
| | BBMP, Municipal Corporations, | 100 HP & above | 250 | Above 500 units | 710 |
| LT-6(a) | Water Supply | Per HP upto 67 HP | 175 | All Units | 550 |
| | | Every additional HP above 67 HP | 275 | | |
| LT-6(b) | Public Lighting | Per KW | 175 | All Units | 700 |
| LT-6(c) | E vehicle charging | Per KW upto 50 KW | 70 | All Units | 450 |
| | | Every addl. KW above 200 KW | 170 | | |
| | | For HT Instalaltions (per KVA) | 200 | | |
| LT-7 | Temporary Supply < 67 HP | Per KW/per month | 200 | All Units | 1150 |

**Retail Supply Tariff for FY24 approved by KERC in Tariff Order 2023 Dated: 12.05.2023 for all ESCOMS except BESCOM**

| Approved by Commission | | | | | |
|---|---|---|---|---|---|
| **Tariff** | **Category Description** | **Load** | **F.C Rs.** | **Slab** | **E.C (Ps./kWh)** |
| HT-1 | Water Sup, drainage | Per KVA | 350 | All Units | 600 |
| HT-2(a) | Industrial, All areas other than | Per KVA | 350 | All Units | 740 |
| | Railway Traction | Per KVA | 350 | All Units | 700 |
| | Effluent Treatement Plants | Per KVA | 350 | All Units | 700 |
| HT-2(b) | Cocmercial, All areas other than | Per KVA | 375 | All Units | 925 |
| HT-2(c)(i) | Govt Hospitals, | Per KVA | 300 | All Units | 750 |
| HT-2(c)(ii) | Pvt. Hospitals | Per KVA | 350 | All Units | 850 |
| HT-3 | Lift Irrig Govt. Dept | Per HP/per month | 150 | All Units | 350 |
| HT-6 | Irrig & agri farms, govt | Per HP/per month | 150 | All Units | 550 |
| HT-4 | Res. Apartments | Per KVA | 300 | All Units | 725 |
| HT-5 | Temporary Supply | Per HP | 400 | All Units | 1150 |

Annexure-2

| Retail Supply Tariff for FY24 approved by KERC in Tariff Order 2023 Dated: 12.05.2023 for BESCOM | | | | | |
|---|---|---|---|---|---|
| APPROVED BY COMMISSION | | | | | |
| Tariff | Category Description | Load | F.C Rs. | Slab | E.C (Ps./kWh) |
| LT-1 | BJ/KJ | Minimum | 100 | | 962 |
| LT-2(a) | Domestic / AEH - | Per KW upto 50 KW | 110 | 0 -100 units | 475 |
| | | Every addn KW above 50 KW | 210 | 0 - All Units | 700 |
| LT-2(b) | Hospitals & Pvt. Edu. Instituins | Per KW upto 50 KW | 180 | All Units | 775 |
| | | Every addn KW above 50 KW | 250 | | |
| LT-3(a) | Commercial, | Per KW upto 50 KW | 200 | All Units | 850 |
| | | Every addn KW above 50 KW | 300 | | |
| LT-3(b) | Hoardings @ adversitment board on Permanent connection basis | Per HP / Kw | 200 | All unit | 1050 |
| LT-4(a) | IP Sets - <=10Hp | | | All Units | 476 |
| LT-4(b) | IP Sets Above 10 HP | Per HP | 135 | All Units | 410 |
| LT-4c | IP Sets - Horticulture | Per HP | 135 | All Units | 425 |
| LT-5 | Industrial | Below 100 HP | 140 | 0 to 500 units | 610 |
| | | 100 HP & above | 250 | Above 500 units | 710 |
| LT-6(a) | Water Supply | Per HP upto 67 HP | 175 | All Units | 550 |
| | | Every additional HP above 67 HP | 275 | | |
| LT-6(b) | Public Lighting | Per KW | 175 | All Units | 700 |
| LT-6(c) | E vehicle charging | Per KW upto 50 KW | 70 | All Units | 450 |
| | | Every addl. KW above 50 KW | 170 | | |
| | | For HT Instalaltions (per KVA) | 200 | | |
| LT-7 | Temporary Supply < 67 HP | Per KW/per month | 200 | All Units | 1150 |

## Retail Supply Tariff for FY24 approved by KERC in Tariff Order 2023 Dated: 12.05.2023 for BESCOM

APPROVED BY COMMISSION

| Tariff | Category Description | Load | F.C Rs. | Slab | E.C (Ps./kWh) |
|---|---|---|---|---|---|
| HT-1 | Water Sup, drainage | Per KVA | 350 | All Units | 600 |
| HT-2(a) | Industrial | Per KVA | 350 | All Units | 740 |
| | BMRCL | Per KVA | 300 | All Units | 525 |
| | Railway Traction | Per KVA | 350 | All Units | 700 |
| | Effluent Treatement Plants | Per KVA | 350 | All Units | 700 |
| HT-2(b) | Commercial - | Per KVA | 375 | All Units | 925 |
| HT-2(c)(i) | Govt Hospitals, | Per KVA | 300 | All Units | 750 |
| | Govt Educational Institutes | | | | |
| HT-2(c)(ii) | Pvt. Hospitals | Per KVA | 350 | All Units | 850 |
| HT-3 | Lift Irrigation | Per HP/per month | 150 | All Units | 350 |
| HT-6 | Irrig & agri farms, govt | Per HP/per month | 150 | All Units | 550 |
| HT-4 | Res. Apartments | Per KVA | 300 | All Units | 725 |
| HT-5 | Temporary Supply | Per HP | 400 | All Units | 1150 |
| HT-5(a) | Bangalore International Exhibition | | | All Units | 1300 |

ಕರ್ನಾಟಕ ಸರ್ಕಾರ

ಸಂಖ್ಯೆ: ಗ್ರಾಅಪಂರಾ 300 ಜಿಪಸ 2022

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ:01-07-2022.

## ಮಾರ್ಗಸೂಚಿ

ವಿಷಯ: 15ನೇ ಹಣಕಾಸು ಯೋಜನೆಯ ಅನುದಾನಕ್ಕೆ 2022-23ನೇ ಸಾಲಿನ ಕ್ರಿಯಾಯೋಜನೆ ತಯಾರಿಸುವ ಬಗ್ಗೆ.

ಉಲ್ಲೇಖ:
1. ಕೇಂದ್ರ ಸರ್ಕಾರದ ಜಂಟಿ ಕಾರ್ಯದರ್ಶಿಗಳ ಅರೆ ಸರ್ಕಾರಿ ಪತ್ರ ಸಂಖ್ಯೆ:ಜಿ-39011/2/2017-ಎಫ್‌ಡಿ, ದಿನಾಂಕ:20-02-2020.
2. ಕೇಂದ್ರ ಸರ್ಕಾರದ ಜಂಟಿ ಕಾರ್ಯದರ್ಶಿಗಳ ಅರೆ ಸರ್ಕಾರಿ ಪತ್ರ ಸಂಖ್ಯೆ:ಎಂ-11015/192/2019-ಸಿಬಿ, ದಿನಾಂಕ:06-03-2020.
3. ಭಾರತ ಸರ್ಕಾರದ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಹಾಗೂ ಪಂಚಾಯತ್ ರಾಜ್ ಮಂತ್ರಾಲಯದ ಕಾರ್ಯದರ್ಶಿಗಳು ಜಂಟಿಯಾಗಿ ಎಲ್ಲಾ ರಾಜ್ಯದ ಮುಖ್ಯ ಕಾರ್ಯದರ್ಶಿಗಳಿಗೆ ಬರೆದಿರುವ ಪತ್ರದ ಸಂಖ್ಯೆ:S-11011/1/2020-SBM/DDWS,ದಿನಾಂಕ:17-03-2020.
4. ಸರ್ಕಾರದ ಮಾರ್ಗಸೂಚಿ ಸಂಖ್ಯೆ:ಗ್ರಾಅಪಂರಾ 191 ಜಿಪಸ 2020, ದಿನಾಂಕ:13-05-2020.
5. ಸರ್ಕಾರದ ಸೇರ್ಪಡೆ ಮಾರ್ಗಸೂಚಿ ಸಂಖ್ಯೆ:ಗ್ರಾಅಪಂರಾ 191 ಜಿಪಸ 2020, ದಿನಾಂಕ:30-05-2020.
6. ಸರ್ಕಾರದ ಸೇರ್ಪಡೆ ಮಾರ್ಗಸೂಚಿ ಸಂಖ್ಯೆ:ಗ್ರಾಅಪಂರಾ 191 ಜಿಪಸ 2020, ದಿನಾಂಕ:05-10-2020.
7. ಸರ್ಕಾರದ ಸೇರ್ಪಡೆ ಮಾರ್ಗಸೂಚಿ ಸಂಖ್ಯೆ:ಗ್ರಾಅಪಂರಾ 191 ಜಿಪಸ 2020, ದಿನಾಂಕ:22-01-2021.
8. ಸರ್ಕಾರದ ಸುತ್ತೋಲೆ ಸಂಖ್ಯೆ:ಗ್ರಾಅಪಂರಾ 263 ಜಿಪಸ 2021, ದಿನಾಂಕ:06-07-2021.
9. ಸರ್ಕಾರದ ಸುತ್ತೋಲೆ ಸಂಖ್ಯೆ:ಗ್ರಾಅಪಂರಾ 435 ಜಿಪಸ 2021, ದಿನಾಂಕ:08-11-2021
10. ಸರ್ಕಾರದ ಸುತ್ತೋಲೆ ಸಂಖ್ಯೆ:ಗ್ರಾಅಪಂರಾ 263 ಜಿಪಸ 2021, ದಿನಾಂಕ:17-11-2021.

******

2022-23ನೇ ಸಾಲಿಗೆ ಕರ್ನಾಟಕ ರಾಜ್ಯಕ್ಕೆ 15ನೇ ಹಣಕಾಸು ಆಯೋಗದ ಅನುದಾನದಲ್ಲಿ ರೂ.2463.00ಕೋಟಿಗಳನ್ನು ನಿಗದಿಪಡಿಸಿದೆ. ಈ ಅನುದಾನದಲ್ಲಿ ರಾಜ್ಯ ಸರ್ಕಾರವು ಶೇ.85ರಷ್ಟು ರೂ.2093.55ಕೋಟಿಗಳ ಅನುದಾನ ಗ್ರಾಮ ಪಂಚಾಯತಿಗಳಿಗೆ, ಶೇ.10ರಷ್ಟು ರೂ.246.30ಕೋಟಿಗಳ ಅನುದಾನ ತಾಲ್ಲೂಕು ಪಂಚಾಯತಿಗಳಿಗೆ ಮತ್ತು ಶೇ.5ರಷ್ಟು ರೂ.123.15ಕೋಟಿಗಳ ಅನುದಾನವನ್ನು ಜಿಲ್ಲಾ ಪಂಚಾಯತಿಗಳಿಗೆ ನಿಗಧಿಪಡಿಸಿದೆ. ರಾಜ್ಯದ ವಿವಿಧ ಗ್ರಾಮ, ತಾಲ್ಲೂಕು ಹಾಗೂ ಜಿಲ್ಲಾ ಪಂಚಾಯತಿಗಳಿಗೆ ನಿಗದಿಪಡಿಸಲಾದ ಅನುದಾನವನ್ನು ಕ್ರಮವಾಗಿ ಅನುಬಂಧ-I, ಅನುಬಂಧ-II ಮತ್ತು ಅನುಬಂಧ-IIIರಲ್ಲಿ ನೀಡಲಾಗಿದೆ.

ಉಲ್ಲೇಖದಲ್ಲಿ ನಮೂದಿಸಿರುವ ಕೇಂದ್ರ ಸರ್ಕಾರದ ಪತ್ರಗಳು ಮತ್ತು ರಾಜ್ಯ ಸರ್ಕಾರದಿಂದ ಹೊರಡಿಸಲಾಗಿರುವ ಸುತ್ತೋಲೆ ಹಾಗೂ ಮಾರ್ಗಸೂಚಿಗಳನ್ವಯ ಈ ಕೆಳಕಂಡ ಅಂಶಗಳನ್ನು ಅನುಸರಿಸಿ 15ನೇ ಹಣಕಾಸು ಆಯೋಗದ ಕ್ರಿಯಾಯೋಜನೆಯನ್ನು ತಯಾರಿಸತಕ್ಕದ್ದು.

1. ಪ್ರತಿ ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ ಮತ್ತು ಜಿಲ್ಲಾ ಪಂಚಾಯತಿಗಳಿಗೆ ನಿಗಧಿಪಡಿಸಿರುವ ಅನುದಾನದ ಶೇ.40ರಷ್ಟು ಅನುದಾನವು ಮೂಲ(ಅನಿರ್ಬಂಧಿತ) ಅನುದಾನವಾಗಿದ್ದು, ಅನುಕ್ರಮವಾಗಿ ಅನುಬಂಧ-Iರ ಕಾಲಂ(8)ರಲ್ಲಿ, ಅನುಬಂಧ-IIರ ಕಾಲಂ(5)ರಲ್ಲಿ ಮತ್ತು ಅನುಬಂಧ-IIIರ ಕಾಲಂ(4)ರಲ್ಲಿ ತೋರಿಸಲಾಗಿದೆ ಹಾಗೂ ಶೇ.60ರಷ್ಟು ಅನುದಾನವು ನಿರ್ಬಂಧಿತ ಅನುದಾನವಾಗಿದ್ದು, ಅನುಕ್ರಮವಾಗಿ ಅನುಬಂಧ-Iರ ಕಾಲಂ(7)ರಲ್ಲಿ, ಅನುಬಂಧ-IIರ ಕಾಲಂ(4)ರಲ್ಲಿ ಮತ್ತು ಅನುಬಂಧ-IIIರ ಕಾಲಂ(3)ರಲ್ಲಿ ತೋರಿಸಲಾಗಿದೆ.
2. ಮೂಲ(ಅನಿರ್ಬಂಧಿತ) ಅನುದಾನವನ್ನು ಗ್ರಾಮ ಪಂಚಾಯತಿಗಳಿಗೆ ಸಂಬಂಧಿಸಿದಂತೆ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂ.ರಾಜ್ ಅಧಿನಿಯಮ 1993ರ ಪ್ರಕರಣ 58ರಲ್ಲಿ ನಿಗಧಿಪಡಿಸಿರುವಂತಹ ಕಾರ್ಯಗಳಿಗೆ ಯೋಜನೆ ತಯಾರಿಸಿ ವೆಚ್ಚ ಮಾಡುವುದು. ತಾಲ್ಲೂಕು ಪಂಚಾಯತಿಗೆ ಸಂಬಂಧಿಸಿದಂತೆ ಸದರಿ ಅಧಿನಿಯಮದ ಪ್ರಕರಣ 145ರಡಿಯಲ್ಲಿ ತಾಲ್ಲೂಕು ಪಂಚಾಯತಿಗಳಿಗೆ ವಹಿಸಿರುವ ಪ್ರಕಾರ್ಯಗಳಿಗೆ ಯೋಜನೆ ತಯಾರಿಸಿ ವೆಚ್ಚ ಮಾಡುವುದು. ಜಿಲ್ಲಾ ಪಂಚಾಯತಿಗೆ ಸಂಬಂಧಿಸಿದಂತೆ ಸದರಿ ಅಧಿನಿಯಮದ ಪ್ರಕರಣ 184ರಲ್ಲಿ ಜಿಲ್ಲಾ ಪಂಚಾಯತಿಗಳಿಗೆ ವಹಿಸಿರುವ ಪ್ರಕಾರ್ಯಗಳಿಗೆ ಯೋಜನೆಗಳನ್ನು ತಯಾರಿಸಿ ವೆಚ್ಚ ಮಾಡುವುದು. ಮೂಲ(ಅನಿರ್ಬಂಧಿತ) ಅನುದಾನವನ್ನು ಯಾವುದೇ ಕಾರಣಕ್ಕೂ ಸಂಬಳ ಪಾವತಿಸಲು ಅಥವಾ ಇತರೆ ಕಛೇರಿ ವೆಚ್ಚಕ್ಕಾಗಿ ಬಳಸಲು ಅವಕಾಶವಿರುವುದಿಲ್ಲ.
3. ಶೇ.60ರಷ್ಟು ನಿಗಧಿಪಡಿಸಲಾಗಿರುವಂತಹ ನಿರ್ಬಂಧಿತ ಅನುದಾನವನ್ನು ಗ್ರಾಮಾಂತರ ಪ್ರದೇಶದ ನೈರ್ಮಲ್ಯೀಕರಣ ಸೇವೆಗಳನ್ನು ಉತ್ತಮಪಡಿಸಲು ಹಾಗೂ ಬಯಲು ಬಹಿರ್ದೆಸೆ ಮುಕ್ತ ಸ್ಥಿತಿಯ ಸುಸ್ಥಿರತೆ ಕಾಯ್ದುಕೊಳ್ಳಲು, ಗ್ರಾಮಾಂತರ ಪ್ರದೇಶದ ಕುಡಿಯುವ ನೀರು ಸರಬರಾಜು, ಮಳೆ ನೀರು ಕೊಯ್ಲು ಮತ್ತು ನೀರು ಮರು ಬಳಕೆಗೆ ಸಂಬಂಧಿಸಿದಂತಹ ಕೆಲಸ ಕಾರ್ಯಗಳಿಗೆ ಬಳಕೆ ಮಾಡತಕ್ಕದ್ದು. ಈ ಅನುದಾನದಲ್ಲಿ ಮೂರು ಹಂತಗಳಲ್ಲಿ ತೆಗೆದುಕೊಳ್ಳಬಹುದಾದ ಕಾಮಗಾರಿಗಳನ್ನು ಅನುಬಂಧ-IV, ಅನುಬಂಧ-V, ಅನುಬಂಧ-VI ರಲ್ಲಿ ಅನುಕ್ರಮವಾಗಿ ಗ್ರಾಮ, ತಾಲ್ಲೂಕು ಮತ್ತು ಜಿಲ್ಲಾ ಪಂಚಾಯತ್‌ಗಳಲ್ಲಿ ತೆಗೆದುಕೊಳ್ಳಬಹುದಾಗಿದೆ.
4. ಉಲ್ಲೇಖ(3)ರ ಕೇಂದ್ರ ಸರ್ಕಾರ ಪತ್ರದ ಪ್ರಕಾರ ಶೇ.60ರಷ್ಟು ಅನುದಾನ ನಿರ್ಬಂಧಿತ ಅನುದಾನವಾಗಿದ್ದು, ಅದರಲ್ಲಿ ಶೇ.50ರಷ್ಟು ಅನುದಾನವನ್ನು ಕಡ್ಡಾಯವಾಗಿ ಕುಡಿಯುವ ನೀರಿಗೆ ಮತ್ತು ಶೇ.50ರಷ್ಟು ಅನುದಾನವನ್ನು ಕಡ್ಡಾಯವಾಗಿ ನೈರ್ಮಲ್ಯ ಕಾಪಾಡಲು ಬಳಸಬೇಕು. ಒಂದು ವೇಳೆ ಯಾವುದಾದರೂ ಗ್ರಾಮ ಪಂಚಾಯಿತಿಯಲ್ಲಿ ಕುಡಿಯುವ ನೀರು ಆಗಲಿ ಅಥವಾ ನೈರ್ಮಲ್ಯೀಕರಣ ಚಟುವಟಿಕೆಗಳು ಪೂರ್ಣಗೊಂಡಿದ್ದರೆ (Saturate) ಅಂತಹ ಗ್ರಾಮ ಪಂಚಾಯಿತಿಗಳು ಕೇವಲ ಮತ್ತೊಂದು ಅಂಶಕ್ಕೆ ಮಾತ್ರ ಯೋಜನೆಯನ್ನು ತಯಾರಿಸಿ ಅನುಷ್ಠಾನಗೊಳಿಸಬಹುದು.
5. ಉಲ್ಲೇಖ(5)ರ ಸೇರ್ಪಡೆ ಮಾರ್ಗಸೂಚಿಯನ್ವಯ "ಗ್ರಾಮ, ತಾಲ್ಲೂಕು ಮತ್ತು ಜಿಲ್ಲಾ ಪಂಚಾಯತಿಗಳಿಗೆ ಲಭ್ಯವಾಗಿರುವ ಅನುದಾನದಲ್ಲಿ ಶೇಕಡಾ 5ರಷ್ಟು ಅನುದಾನವನ್ನು ವಿಶೇಷಚೇತನರಿಗೆ ಸಂಬಂಧಿಸಿದ ಕಾಮಗಾರಿಗಳನ್ನು ತೆಗೆದುಕೊಳ್ಳಲು ಮೀಸಲಿರಿಸತಕ್ಕದ್ದು, ವೈಯಕ್ತಿಕ ಸವಲತ್ತುಗಳನ್ನು ನೀಡಲು ಅವಕಾಶವಿರುವುದಿಲ್ಲ.
6. ಉಲ್ಲೇಖ(6)ರನ್ವಯ 15ನೇ ಹಣಕಾಸು ಆಯೋಗ ಅನುದಾನವನ್ನು ಈ ಕೆಳಕಂಡ ಅಂಶಗಳಿಗೆ ಬಳಸುವುದು.

- ಜಿಲ್ಲಾ ಪಂಚಾಯತಿ, ತಾಲ್ಲೂಕು ಪಂಚಾಯತಿ ಹಾಗೂ ಗ್ರಾಮ ಪಂಚಾಯತಿಗಳಿಗೆ 15ನೇ ಹಣಕಾಸು ಆಯೋಗದ ಮೂಲ(ಅನಿರ್ಬಂಧಿತ) ಅನುದಾನದಡಿ ಅಗತ್ಯತೆ ಆಧಾರದ ಮೇಲೆ ವಿದ್ಯುತ್ ಬಿಲ್ಲುಗಳನ್ನು ಕಡಿಮೆ ಮಾಡುವ ಉದ್ದೇಶದಿಂದ ಅಸಂಪ್ರದಾಯಿಕ ಇಂಧನ ಕಾರ್ಯಕ್ರಮವಾದ ಸೋಲಾರ್ ವಿದ್ಯುತ್‌ನ್ನು ಅಳವಡಿಸಿಕೊಳ್ಳುವುದು.
- ಕೃಷಿ, ತೋಟಗಾರಿಕೆ ಮತ್ತು ರೇಷ್ಮೆ ಬೆಳೆಗಳ ಉತ್ಪಾದನೆಯನ್ನು ಹೆಚ್ಚಿಸಲು ಸಂಬಂಧಿಸಿದ ಸರ್ಕಾರಿ ಯೋಜನೆಗಳ ಜೊತೆ ಒಗ್ಗೂಡಿಸುವುದು.
- ಬಡತನ ನಿರ್ಮೂಲನಾ ಕಾರ್ಯಕ್ರಮಗಳನ್ನು NRLM ಮತ್ತು ಸಂಜೀವಿನಿಯ ಜೊತೆ ಒಗ್ಗೂಡಿಸಿ ಅನುಷ್ಠಾನ ಮಾಡುವುದು.
- ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣಕ್ಕೆ ಸಂಬಂಧಿಸಿದ ಮೂಲಭೂತ ಸೌಕರ್ಯ ಅಭಿವೃದ್ಧಿಪಡಿಸಲು ಕ್ರಮವಹಿಸುವುದು.
- ಶಾಲೆಯಿಂದ ಹೊರ ಉಳಿದ ಮಕ್ಕಳ ಗಣತಿ ಕಾರ್ಯ ಮತ್ತು ಅವರನ್ನು ಮತ್ತೆ ಔಪಚಾರಿಕ ಶಿಕ್ಷಣ ವ್ಯವಸ್ಥೆಯೊಳಗೆ ತರಲು ಕ್ರಮವಹಿಸುವುದು.
- ಗ್ರಂಥಾಲಯ ಅಥವಾ ವಾಚನಾಲಯಗಳನ್ನು ನಿರ್ವಹಿಸುವುದು.
- ಆರೋಗ್ಯ ಇಲಾಖೆಯ ಪಿಹೆಚ್‌ಸಿ, ಸಿಹೆಚ್‌ಸಿ ಮತ್ತು ಉಪಕೇಂದ್ರಗಳಿಗೆ ಅಗತ್ಯವಾದ ಮೂಲಭೂತ ಸೌಕರ್ಯಗಳನ್ನು ಒದಗಿಸುವುದು.
- ಸಾಂಕ್ರಾಮಿಕ ರೋಗಗಳ ತಡೆಗಾಗಿ ಮತ್ತು ಅವುಗಳ ವಿರುದ್ಧ ಪರಿಹಾರಾತ್ಮಕ ಕ್ರಮಗಳನ್ನು ಜಾರಿಗೆ ತರುವುದು.
- ಮಹಿಳೆಯರು ಮತ್ತು ಮಕ್ಕಳು, ವಿಶೇಷಚೇತನರು ಮತ್ತು ಹಿರಿಯ ನಾಗರೀಕರ ಕಲ್ಯಾಣಕ್ಕಾಗಿ ಕಾರ್ಯಕ್ರಮಗಳನ್ನು ರೂಪಿಸಿ ಅನುಷ್ಠಾನಗೊಳಿಸುವುದು.
- ಪಶುಸಂಗೋಪನ ಇಲಾಖೆ ಆಸ್ಪತ್ರೆಗಳು ಹಾಗೂ ಚಿಕಿತ್ಸಾಲಯಗಳಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸುವುದು.

7. ಉಲ್ಲೇಖ(7)ರನ್ವಯ ಜಿಲ್ಲಾ ಪಂಚಾಯತಿ ಹಾಗೂ ತಾಲ್ಲೂಕು ಪಂಚಾಯತಿಗಳಿಗೆ 15ನೇ ಹಣಕಾಸು ಆಯೋಗ ನಿರ್ಬಂಧಿತ ಅನುದಾನದಡಿ ನಿಗಧಿಪಡಿಸಿರುವ ಅನುದಾನವನ್ನು ಸರ್ಕಾರಿ ಶಾಲೆಗಳು ಮತ್ತು ಅಂಗನವಾಡಿಗಳ ಶೌಚಾಲಯಗಳನ್ನು ನಿರ್ಮಿಸಲು ಬಳಸುವುದು ಹಾಗೂ ಸರ್ಕಾರಿ ಆಸ್ಪತ್ರೆಗಳು ಮತ್ತು ಸಾರ್ವಜನಿಕ ವಸತಿ ನಿಲಯಗಳಿಗೆ ಹೆಚ್ಚುವರಿ ಕುಡಿಯುವ ನೀರಿನ ಸರಬರಾಜು ಮತ್ತು ನೈರ್ಮಲ್ಯೀಕರಣ ವ್ಯವಸ್ಥೆಗೆ ಬಳಸಲು ಮೀಸಲಿರಿಸತಕ್ಕದ್ದು ಹಾಗೂ ಜಿಲ್ಲಾ ಪಂಚಾಯತಿ ಮತ್ತು ತಾಲ್ಲೂಕು ಪಂಚಾಯತಿಗಳಿಗೆ 15ನೇ ಹಣಕಾಸು ಆಯೋಗ ನಿರ್ಬಂಧಿತ ಅನುದಾನದಡಿ ನಿಗಧಿಪಡಿಸಿರುವ ಅನುದಾನದಲ್ಲಿ ಅತೀ ಹೆಚ್ಚಾಗಿ ಚರಂಡಿ ಕಾಮಗಾರಿಗಳನ್ನು ಕೈಗೊಳ್ಳುತ್ತಿದ್ದು, ಸದರಿ ಕಾಮಗಾರಿಗಳನ್ನು ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆಯಡಿ ಕೈಗೊಳ್ಳತಕ್ಕದ್ದು.
8. ಗ್ರಾಮ ಪಂಚಾಯತಿಗಳು ಹಣಕಾಸು ಆಯೋಗದ ಅನುದಾನವನ್ನು ಬಳಸಿ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿರುವ ಸಾರ್ವಜನಿಕ ಕಟ್ಟಡಗಳು/ಆಸ್ತಿಗಳ ದುರಸ್ಥಿ ಮತ್ತು ನಿರ್ವಹಣೆಯನ್ನು ಕೈಗೊಳ್ಳುವ ಕುರಿತು ಉಲ್ಲೇಖ(9)ರ ಸುತ್ತೋಲೆಯನ್ನು ಪಾಲಿಸತಕ್ಕದ್ದು.
9. ಉಲ್ಲೇಖ(10)ರನ್ವಯ ಗ್ರಾಮ, ತಾಲ್ಲೂಕು ಮತ್ತು ಜಿಲ್ಲಾ ಪಂಚಾಯತಿಗಳ ನೈರ್ಮಲ್ಯ ಮತ್ತು ಬಯಲು ಬಹಿರ್ದೆಸೆ ಮುಕ್ತ ಸ್ಥಿತಿಯನ್ನು ಕಾಪಾಡಲು ತೆಗೆದುಕೊಳ್ಳಬಹುದಾದ ಚಟುವಟಿಕೆಗಳಡಿ ಕುಡಿಯುವ ನೀರು ಸರಬರಾಜು ಹಾಗೂ ಬೂದು ನೀರಿನ ಕಾರ್ಯಾಚರಣೆ ಮತ್ತು ನಿರ್ವಹಣೆಗೆ ಸಂಬಂಧಿಸಿದಂತೆ ತಗಲುವ ವಿದ್ಯುತ್ ಬಿಲ್ಲಿನ ಮೊತ್ತವನ್ನು 15ನೇ ಹಣಕಾಸು ಆಯೋಗದ ನಿರ್ಬಂಧಿತ ಅನುದಾನದಡಿ ಪಾವತಿಸತಕ್ಕದ್ದು.
10. ಗ್ರಾಮ, ತಾಲ್ಲೂಕು ಮತ್ತು ಜಿಲ್ಲಾ ಪಂಚಾಯಿತಿಗಳು ತಮ್ಮ ಅನುದಾನವನ್ನು ಹೊಂದಾಣಿಕೆ ಮಾಡಿಕೊಂಡು ಒಗ್ಗೂಡಿಸುವ ಕಾಮಗಾರಿಗಳನ್ನು ತೆಗೆದುಕೊಳ್ಳಬಹುದು. ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಾಹಕ

ಅಧಿಕಾರಿಗಳು ಎಲ್ಲಾ ಮೂರು ಹಂತದ ಸಂಸ್ಥೆಗಳ ಜೊತೆ ಚರ್ಚಿಸಿ ಸಾಧ್ಯವಾದಷ್ಟು ಯಾವುದಾದರೂ ಗ್ರಾಮಗಳಲ್ಲಿ ಅಥವಾ ಗ್ರಾಮಗಳ ಗುಂಪಿನಲ್ಲಿ ಇರುವಂತಹ ಸಮಸ್ಯೆಗಳನ್ನು ಪರಿಹರಿಸುವ ನಿಟ್ಟಿನಲ್ಲಿ ಬೃಹತ್ ಕಾಮಗಾರಿಗಳನ್ನು ಒಗ್ಗೂಡಿಸುವಿಕೆ ಆಧಾರದಲ್ಲಿ ತೆಗೆದುಕೊಳ್ಳಬಹುದು.

11. ಒಂದು ವೇಳೆ ಸದರಿ ಅನುಬಂಧಗಳಲ್ಲಿ ತೋರಿಸಿರುವ ಕಾಮಗಾರಿಗಳನ್ನು ಹೊರತುಪಡಿಸಿ ಬೇರೆ ಕಾಮಗಾರಿಗಳನ್ನು ತೆಗೆದುಕೊಳ್ಳಬೇಕಾದರೆ ಸರ್ಕಾರದಲ್ಲಿ ಪ್ರಸ್ತಾವನೆ ಸಲ್ಲಿಸಿ ಅನುಮೋದನೆ ಪಡೆಯತಕ್ಕದ್ದು. ಸದರಿ ಅನುಬಂಧಗಳಲ್ಲಿ ಇರುವಂತಹ ಕಾಮಗಾರಿಗಳಿಗೆ ಅಗತ್ಯವಾದಂತಹ ಮಾರ್ಗಸೂಚಿಯನ್ನು ರಾಜ್ಯ ಸರ್ಕಾರದ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಯೋಜನೆ ಇಲಾಖೆಯು ಹೊರಡಿಸತಕ್ಕದ್ದು ಮತ್ತು ಅಗತ್ಯವಾದಂತಹ ತರಬೇತಿಯನ್ನು ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಂಸ್ಥೆ(ANSSIRD & PR) ಅಥವಾ ಪ್ರತಿಷ್ಠಿತ ತರಬೇತಿ ಸಂಸ್ಥೆಗಳ ಸಹಯೋಗದಲ್ಲಿ ಹಮ್ಮಿಕೊಳ್ಳತಕ್ಕದ್ದು.

12. ಎಲ್ಲಾ ಮೂರು ಹಂತಗಳಲ್ಲಿ ಕ್ರಿಯಾಯೋಜನೆಗಳು ಗ್ರಾಮ ಪಂಚಾಯಿತಿ ಅಭಿವೃದ್ಧಿ ಯೋಜನೆ(GPDP)ಯ ಭಾಗವಾಗಿರತಕ್ಕದ್ದು. ಅದರಂತೆ, 2022-23ನೇ ಸಾಲಿನ ಗ್ರಾಮ ಪಂಚಾಯಿತಿ ಅಭಿವೃದ್ಧಿ ಯೋಜನೆ(GPDP), ತಾಲ್ಲೂಕು ಪಂಚಾಯತ್ ಅಭಿವೃದ್ಧಿ ಯೋಜನೆ (BDP) ಮತ್ತು ಜಿಲ್ಲಾ ಪಂಚಾಯತ್ ಅಭಿವೃದ್ಧಿ ಯೋಜನೆ(DDP) ಗಳನ್ನು ತಯಾರಿಸಿ, ನಿಗಧಿತ ಅವಧಿಯೊಳಗೆ ಇ-ಗ್ರಾಮ ಸ್ವರಾಜ್ ತಂತ್ರಾಂಶದಲ್ಲಿ ಅಳವಡಿಸಿ ಅನುಷ್ಠಾನಗೊಳಿಸುವುದು.

13. ಅನುಬಂಧ-IV, ಅನುಬಂಧ-V, ಅನುಬಂಧ-VI ರಲ್ಲಿ ಸೂಚಿಸಿರುವ ಚಟುವಟಿಕೆಗಳನ್ನು ಪಂಚಾಯತ್ ರಾಜ್ ಸಂಸ್ಥೆಗಳು ತಾವೇ ಸ್ವತಃ ಸೇವೆಗಳನ್ನು ನೀಡಲು ಕೈಗೊಳ್ಳಬಹುದು ಅಥವಾ ಇದಕ್ಕಾಗಿ ಸೇವೆ ನೀಡುವಂತಹ ಸಂಸ್ಥೆಗಳನ್ನು ಗುರುತಿಸಿ ಪರಸ್ಪರ ಒಪ್ಪಂದದ ಮೇರೆಗೆ ಅಂತಹ ಸಂಸ್ಥೆಗಳ ಸೇವೆಯನ್ನು ಪಡೆಯಬಹುದು. ಕೇಂದ್ರ ಸರ್ಕಾರವು ಮುಂದೆ ಇದಕ್ಕೆ ವಿವರವಾದ ಮಾರ್ಗಸೂಚಿಯನ್ನು ಹಾಗೂ ಮಾದರಿ ಗುತ್ತಿಗೆ ಒಪ್ಪಂದದ ವಿವರಗಳನ್ನು ನೀಡುತ್ತದೆ.

14. ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ರ ಪ್ರಕಾರ ಶೇ.25ರಷ್ಟು ಅನುದಾನವನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಭಿವೃದ್ಧಿಗೆ ಮೀಸಲಿರಿಸತಕ್ಕದ್ದು.

15. ಕ್ರಿಯಾಯೋಜನೆಗಳನ್ನು ಇ-ಗ್ರಾಮ ಸ್ವರಾಜ್ ತಂತ್ರಾಂಶದಲ್ಲಿ ಅಪ್‌ಲೋಡ್ ಮಾಡುವುದು ಕಡ್ಡಾಯವಾಗಿರುತ್ತದೆ. ವೆಚ್ಚಗಳನ್ನು ನಿಯಮಾನುಸಾರ ಲೆಕ್ಕಪತ್ರ ನಿಯಮಗಳ ಪ್ರಕಾರ ದಾಖಲಿಸಿ, ಇ-ಗ್ರಾಮ ಸ್ವರಾಜ್ ತಂತ್ರಾಂಶದ ಮುಖಾಂತರವೇ ಕಡ್ಡಾಯವಾಗಿ ಪಾವತಿಸತಕ್ಕದ್ದು.

16. 15ನೇ ಹಣಕಾಸು ಆಯೋಗದ ಅನುದಾನದಡಿ ಕೈಗೊಳ್ಳುವ ಎಲ್ಲಾ ಕಾಮಗಾರಿಗಳು ಸಾಮಾಜಿಕ ಲೆಕ್ಕ ಪರಿಶೋಧನೆಗೆ ಒಳಪಡಿಸತಕ್ಕದ್ದು.

17. 15ನೇ ಹಣಕಾಸು ಆಯೋಗ ಅನುದಾನದ ಬಳಕೆ ಸಂಬಂಧ ಈ ಹಿಂದೆ ಹೊರಡಿಸಲಾದ ಎಲ್ಲಾ ಆದೇಶ ಮತ್ತು ಸುತ್ತೋಲೆಗಳು ಮುಂದುವರೆಯುತ್ತವೆ. ಅದರಂತೆ ಕ್ರಮವಹಿಸುವುದು.

(ಎಂ.ಎನ್.ಬಾನೋತ್) 01/07/22

ಸರ್ಕಾರದ ಜಂಟಿ ಕಾರ್ಯದರ್ಶಿ(ಜಿ.ಪಂ)

ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಇವರಿಗೆ:

1. ಎಲ್ಲಾ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.

2. ಎಲ್ಲಾ ತಾಲ್ಲೂಕು ಪಂಚಾಯತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳು(ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಮೂಲಕ).
3. ಎಲ್ಲಾ ಗ್ರಾಮ ಪಂಚಾಯತಿ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು(ಕಾರ್ಯನಿರ್ವಾಹಕ ಅಧಿಕಾರಿಗಳ ಮೂಲಕ).
4. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.

ಪ್ರತಿ:

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆರವರ ಆಪ್ತ ಕಾರ್ಯದರ್ಶಿ.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ(ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆರವರ ಹಿರಿಯ ಆಪ್ತ ಕಾರ್ಯದರ್ಶಿ.
3. ಆಯುಕ್ತರು, ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ, ಕೆ.ಜಿ.ರಸ್ತೆ, ಬೆಂಗಳೂರುರವರ ಆಪ್ತ ಸಹಾಯಕ.
4. ಸರ್ಕಾರದ ಜಂಟಿ ಕಾರ್ಯದರ್ಶಿ(ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆಯವರ ಆಪ್ತ ಸಹಾಯಕ.
5. ನಿರ್ದೇಶಕರು(ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆಯವರ ಆಪ್ತ ಸಹಾಯಕ.
6. ಆಂತರಿಕ ಆರ್ಥಿಕ ಸಲಹೆಗಾರರು ಹಾಗೂ ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆಯವರ ಆಪ್ತ ಸಹಾಯಕ.
7. ನಿರ್ದೇಶಕರು, ಇ-ಆಡಳಿತ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆಯವರ ಆಪ್ತ ಸಹಾಯಕರು- ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಕ್ರಮವಹಿಸುವುದು.